ಶ್ರೀ ಸಿ. ಎಂ ರೇವಣ್ಣಸಿದ್ದಯ್ಯ.—ಸರ್ಕಾರದವರು ನೇಮಕ ಮಾಡಿದಂಥ ಸಮಿತಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆ. ಒಂದು ಕ್ವಿಂಟಾಲ್ ಒಡಬು ಧಾನ್ಯದ ಬೆಲೆ ೧೫೦-೧೬೦ ರೂಪಾಯಿಗಳಷ್ಟು ಇರಬೇಕೆಂದು ಅವರು ಸೂಚಿಸಿದ್ದಾರೆ. ಅದು ಇರಲಿ, ಈಗ ಇನ್ನು ೧೫ ದಿವಸಗಳಲ್ಲಿ ಮಾಲು ಮಾರುಕಟ್ಟೆಗೆ ಬರುವುದಿದೆ. ಆ ಮಾಲನ್ನು ಖರೀದಿ ಮಾಡುವ ವ್ಯವಸ್ಥೆಯಾಗಬೇಕು.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಬಹಳ ಆಗ್ರಪೂರ್ವಕವಾಗಿ ಹೇಳಿದ್ದಾರೆ. ಅವರು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಪೊಳ್ಳು ಆಶ್ವಾಸನೆಯಂನ್ನು ಕೊಡದೆ ವಾಸ್ತವಿಕವಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಈ ಕೊಡಲೇ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸವಿಸ್ತಾರವಾದ ಉತ್ತರವನ್ನು ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಒಂದು ಸಣ್ಣ ಸ್ಪಷ್ಟೀಕರಣ ಇದೆ ಸ್ವಾಮಿ.

ಅಧ್ಯಕ್ಷರು— ನೀವು ಯಾವಾಗಲೂ ಇದೇ ರೀತಿ ಮಾಡುತ್ತೀರಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ಈಗಾಗಲೇ ಹೆಸರು ಬೇಳೆ ಬೆಲೆ ೫೫೦ ರೂಪಾಯಿಗಳಿಂದ ೩೦೦ ರೂಪಾಯಿಗಳಿಗೆ ಇಳಿದಿದೆ. ಜೋಳ ೧೫೦ ರೂಪಾಯಿಗಳಿಂದ ೧೨೦ ರೂಪಾಯಿಗಳಿಗೆ ಇಳಿದಿದೆ. ಇನ್ನು ೧೫ ದಿವಸಗಳಲ್ಲಿ ಒಡಬು ಧಾನ್ಯಗಳು ಮಾರುಕಟ್ಟೆಗೆ ಬರುವುದರಲ್ಲಿ ಇವೆ ಆದ್ದರಿಂದ ತಕ್ಷಣ ಮಾನ್ಯ ಸಚಿವರು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಬೆಂಬಲದ ಬೆಲೆಯಲ್ಲಿ ಖರೀದಿ ಮಾಡಿ ಎಂದು ಹೇಳಿದರೆ ಮಾತ್ರ ಮಾರುಕಟ್ಟೆಗಳಲ್ಲಿ ಕಂಟ್ರೋಲ್‌ಗೆ ಬರುತ್ತವೆ. ಇಲ್ಲದಿದ್ದರೆ ಡಿಸ್ಟ್ರೆಸ್‌ಸೇಲ್ ಆಗುತ್ತದೆ...

ಅಧ್ಯಕ್ಷರು.—ಆಶ್ವಾಸನೆ ಕೊಟ್ಟಿದ್ದಾರೆ. ಅದು ಸ್ಪಷ್ಟವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ಸುಮಾರು ಒಂದು ಲಕ್ಷ ಇರಪತ್ತಾರು ಸಾವಿರ ಎಕರೆ ಗಳಲ್ಲಿ ಒಡಬು ಧಾನ್ಯಗಳು ಬೆಳೆದಿದ್ದು ಆ ಮಾಲು ಇವತ್ತು ಮಾರುಕಟ್ಟೆಗೆ ಬರುತ್ತಿದೆ.

ಅಧ್ಯಕ್ಷರು,—ಮಾನ್ಯ ಮಂತ್ರಿಗಳು ಉತ್ತರ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಸಮಗ್ರವಾಗಿ ಕೊಟ್ಟಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಒಂದು ಪ್ರಶ್ನೆ ಕೇಳುತ್ತೇನೆ, ಈಗ ಗುಜರಾತ್, ರಾಜಸ್ಥಾನ್, ಪಂಜಾಬ್ ಇತ್ಯಾದಿ ಕಡೆಗಳಲ್ಲಿ ಕೇಂದ್ರ ಸರ್ಕಾರದ ಎಫ್. ಸಿ. ಐ ನವರು ಬಂದು ತೆಗೆದು ಕೊಂಡು ಹೋಗುತ್ತಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೂ ಬಂದು ತೆಗೆದುಕೊಂಡು ಹೋಗುವಂತಹ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಆ ಬಗ್ಗೆ ಪರಿಶೀಲನೆ ಮಾಡದೆ ನಾನು ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲ. ಇನ್ನು ಬೆಂಬಲದ ಬೆಲೆಯಲ್ಲಿ ರೈತರ ಮಾಲನ್ನು ಖರೀದಿ ಮಾಡಬೇಕೆಂದು ಹೇಳಿದ್ದಾರೆ. ಆ ಬಗ್ಗೆ ಇನ್ನು ೧೫ ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

VI ಹೊಸನಗರ ತಹಶೀಲ್ದಾರ್ ಅವರು ಶಾಸಕರಿಗೆ ರಾಜೀನಾಮೆ ಕೊಡುವ ಬಗ್ಗೆ ಸವಾಲು ಹಾಕಿರುವುದು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ಹೊಸನಗರ ತಹಶೀಲ್ದಾರ್‌ರವರು ಹೊಸ ನಗರ ಕ್ಷೇತ್ರದ ಶಾಸಕರಿಗೆ ರಾಜೀನಾಮೆ ಕೊಡುವರೇ ಎಂದು ಸವಾಲು ಹಾಕಿರುವ ವಿಷಯದ ಬಗ್ಗೆ ನಾನು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ (ಮಾನ್ಯ ಸಾರಿಗೆ ಸಚಿವರು).—ಮಾನ್ಯ ಕಂದಾಯ ಸಚಿವರ ಪರವಾಗಿ ನಾನು ಈ ಹೇಳಿಕೆಯನ್ನು ಕೊಡುತ್ತೇನೆ.

ದಿನಾಂಕ ೨೭-೭-೮೬ರ 'ಕನ್ನಡ ಪ್ರಭಾ' ದಿನ ಪತ್ರಿಕೆಯಲ್ಲಿ ಹೊಸನಗರ ತಾಲ್ಲೂಕು ತಹಶೀಲ್ದಾರ್ ರವರು, ವಿಧಾನ ಸಭಾ ಸದಸ್ಯರಿಗೆ, ತಹಶೀಲ್ದಾರ್‌ರವರ ಮೇಲೆ ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾದವೆಂದೂ, ಹಾಗೂ ಸದರಿ ಆಪಾದನೆಗಳು, ತಮ್ಮ ಮೇಲಾಧಿಕಾರಿಗಳ ತನಿಖೆಯಿಂದ ಸಾಬೀತಾದಲ್ಲಿ ಗೊಳಿಲ್ಬಟ್ಟರೆ ತಾವು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವುದಾಗಿಯೂ, ಆಪಾದನೆ ಸಾಬೀತಾಗದಿದ್ದರೆ ವಿಧಾನ ಸಭಾ ಸದಸ್ಯರು, ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಲು ಸಿದ್ಧರೇ ಎಂದು ಪ್ರಶ್ನಿಸಿದ್ದ ಬಗ್ಗೆ ವರದಿಯಾಗಿದೆ. ಈ ಪತ್ರಿಕಾ ವರದಿಯು ತಹಶೀಲ್ದಾರ್‌ರವರು ಹೊಸನಗರ ತಾಲ್ಲೂಕಿನಲ್ಲಿ ಮೇಲ್ವು ಸಂಗ್ರಹಣ ಕಾರ್ಯ ನಿರ್ವಹಿಸುವ ಬಗ್ಗೆ ನೀಡಿದ್ದ ಹೇಳಿಕೆಯ ಸಂದರ್ಭಕ್ಕೆ ಸಂಬಂಧಿಸಿದ್ದು, ಪತ್ರಿಕೆಯಲ್ಲಿ ವರದಿ ತಪ್ಪಾಗಿ ಪ್ರಕಟವಾಗಿರುತ್ತದೆ. ಇದನ್ನು ತಹಶೀಲ್ದಾರ್‌ರವರು ಮನಗಂಡು, ಸರಿಯಾದ ವರದಿಯನ್ನು ದಿನಾಂಕ ೨೦-೮-೮೬ರ 'ಕನ್ನಡ ಪ್ರಭಾ' ಪತ್ರಿಕೆಯಲ್ಲಿ ಸರಿಯಾದ ವಿಷಯವನ್ನು ತಿಳಿಸಿ, ಪತ್ರಿಕಾ ಹೇಳಿಕೆ ಕೊಟ್ಟಿರುತ್ತಾರೆ.

ಹೊಸನಗರ ತಹಶೀಲ್ದಾರ್, ವಿಧಾನ ಸಭಾ ಸದಸ್ಯರಿಗೆ ರಾಜೀನಾಮೆ ಕೊಡಲು ಕೇಳಿದ್ದರೆಂದು ಸುದ್ದಿ ತಪ್ಪಾಗಿ ವರದಿಯಾಗಿರುತ್ತದೆಯೇ ಹೊರತು, ಅದು ಸತ್ಯವಲ್ಲ. ಆದರೂ ಸಹ, ತಹಶೀಲ್ದಾರ್‌ರವರಿಗೆ ಎಚ್ಚರಿಕೆಯಿಂದಿರಲು, ಮಾನ್ಯ ಸದಸ್ಯರ ಬಗ್ಗೆ ಸೂಕ್ತ ರೀತಿಯಲ್ಲಿ ನಡೆದುಕೊಳ್ಳಲು ತಿಳುವಳಿಕೆ ನೀಡಲಾಗುವುದು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ಪತ್ರಿಕೆಗಳಲ್ಲಿ ಬಂದಿರುವ ಹೇಳಿಕೆ ಸರಿಯಾದುದು ಅಲ್ಲ ಎನ್ನುವ ಒಂದೇ ಕಾರಣವನ್ನು ಇಲ್ಲಿ ಕೊಟ್ಟಿದ್ದಾರೆ. ಈ ವಿಚಾರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದು ಅಷ್ಟೇ ಸಾಲ್ಲ. ಮಾನ್ಯ ಸದಸ್ಯರಾದಂಥ ಸ್ವಾಮಿರಾವ್‌ರವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಕೇಂದ್ರಾಯ ಮಂತ್ರಿಗಳಿಗೆ ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ ಹಾಗೂ ಡಿವಿಜನಲ್ ಕಮಿಷನರ್‌ಗೆ ಹಾಗೂ ಡಿವಿಮೊಗ್ಗ ಜಿಲ್ಲಾಧಿಕಾರಿಯವರಿಗೂ ಪತ್ರವನ್ನು ಬರೆದು ಆ ತಹಶೀಲ್ದಾರ್‌ರವರ ವರ್ತನೆ ಮತ್ತು ಆತ ಮಾಡುವಂತಹ ಕೆಲಸದ ಕಾಳಜಿಯ ಬಗ್ಗೆ ತಿಳಿಸಿದ್ದಾರೆ. ಆತನ ಪಕ್ಷ ಕರ್ತವ್ಯದ ದಿಸೆಯಿಂದಾಗಿ ಸಂಗ್ರಹಣೆ ಮಾಡಿದ್ದ ಹುಲ್ಲು ಹಾಳಾಗಿ ಹೋಗಿದೆ. ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಪತ್ರಿಕೆಗಳಲ್ಲಿ ಬಂದಿರುವಂತಹ ವಿಚಾರಗಳನ್ನು ಇಲ್ಲವೆಂದು ಹೇಳುವುದು ಒಂದು ಅಭ್ಯಾಸವಾಗಿಬಿಟ್ಟಿದೆ. ಒಬ್ಬ ತಹಶೀಲ್ದಾರ್‌ರವರು ಶಾಸಕರ ರಾಜೀನಾಮೆಯನ್ನು ಕೇಳಿದ್ದುದು ಒಂದೇ, ಅಲ್ಲಿ ಈ ವಿಷಯವನ್ನು ಏಪ್ರಿಲ್ ಮೇ ತಿಂಗಳಲ್ಲಿ ತಂತಿ ಸಂದೇಶದ ಮೂಲಕ ಸರ್ಕಾರಕ್ಕೆ ಕಳುಹಿಸಿ ಸುಮಾರು ೧೦ ಸಾವಿರ ರೂಪಾಯಿಗಳ ಹುಲ್ಲು ಹಾಳಾಗಿದೆ ಎಂದು ಸಹ ಶಾಸಕರು ತಿಳಿಸಿದ್ದಾರೆ. ತಂತಿ ಸಂದೇಶ ಕಳುಹಿಸಿರುವ ಮೇಲಾದರೂ ಸರ್ಕಾರಕ್ಕೆ ಈ ವಿಚಾರ ಗೊತ್ತಿರಬೇಕಲ್ಲವೇ ? ಒಂದು ವೇಳೆ ಈ ವಿಚಾರ ಗೊತ್ತಿದ್ದರೆ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿ ಸರಿಯಲ್ಲವೆಂದು ಹೇಗೆ ಹೇಳುತ್ತೀರಿ ? ಅಧಿಕಾರಿಗಳು ಬರುವುದಕ್ಕೆ ಒಂದು ಪ್ರೊಸೀಜರ್ ಇದೆ. ಶಾಸಕರು ಶಾಸಕರಾಗಿ ಆಯ್ಕೆಯಾಗಿ ಬರುವುದಕ್ಕೂ ಒಂದು ಪ್ರೊಸೀಜರ್ ಇದೆ. ಮಾನ್ಯ ಸದಸ್ಯರಾದಂಥ ಸ್ವಾಮಿರಾವ್‌ರವರು ಲಂಚ ಕೊಟ್ಟು ಶಾಸಕರಾಗಿ ಆಯ್ಕೆಯಾಗಿ ಬರಲಿಲ್ಲ. ಅಥವಾ ಯಾವುದೋ ಒಂದು ರಾಜಕೀಯ ಒತ್ತಡಕ್ಕೆ ಮಣಿದು ಅಧಿಕಾರಕ್ಕೆ ಬರಲಿಲ್ಲ. ಅಥವಾ ಬೇರೆಯವರ ಸಹಾಯ ಪಡೆದು ಶಾಸಕರಾಗಿ ಬರಲಿಲ್ಲ. ಅವರನ್ನು ಜನತೆ ಆಯ್ಕೆ ಮಾಡಿ ಕಳುಹಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಕೂಲಂಕುಷವಾಗಿ ಖಂಡಪುಂಡವಾಗಿ ಕ್ರಮ ಕೈಗೊಳ್ಳಬೇಕು. ಮತ್ತು ಆ ಅಧಿಕಾರಿಯನ್ನು ಅಮಾನತ್ತಿನಲ್ಲಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಇಲ್ಲಿ ಪ್ರಶ್ನೆ ಇರತಕ್ಕದ್ದು ತಹಶೀಲ್ದಾರರು ಸವಾಲು ಹಾಕಿದ್ದರೋ ಇಲ್ಲವೋ ಎನ್ನತಕ್ಕದ್ದಾದು. ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ದಿನಾಂಕ ೨೦-೮-೮೬ ರಲ್ಲಿ ಆಯರು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. 'ಶಾಸಕರಿಗೆ ತಹಶೀಲ್ದಾರರ ಸವಾಲು ಎನ್ನುವ ವರದಿಯನ್ನು ಹೊಸನಗರ ತಹಶೀಲ್ದಾರ್ ರತ್ನಾಕರ್‌ರವರು ನಿರಾಕರಿಸಿದ್ದಾರೆ'. ತಾಲ್ಲೂಕು ಮೇವು ಸಂಗ್ರಹಕ್ಕೆ ಸಂಬಂಧಿಸಿದಂತೆ ಶಾಸಕ ಸ್ವಾಮಿರಾವ್‌ರವರು ಮಾಡಿದ ಆಪಾದನೆಗೆ ಮಾತ್ರ ಪತ್ರಿಕೆಗಳಿಗೆ ಸ್ಪಷ್ಟನೆ, ಶಾಸಕರಿಗೆ ಯಾವುದೇ ರೀತಿಯ ಸವಾಲು ಹಾಕಿಲ್ಲ ಯಾವುದೇ ಹೇಳಿಕೆಯನ್ನು ನೀಡಿಲ್ಲವೆಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ಹೇಳಿದ್ದಾರೆ. ಶಾಸಕರಿಗೆ ಸವಾಲು ಹಾಕಿಲ್ಲವೆಂದು ಅವರೇ ಒಪ್ಪಿಕೊಂಡಿದ್ದಾರೆ. ಸರ್ಕಾರ ಅವರಿಗೆ ಈಗಾಗಲೇ ಎಚ್ಚರಿಕೆಯನ್ನು ಕೊಟ್ಟಿದೆ. ಮಾನ್ಯ ಸದಸ್ಯರುಗಳ ಬಗ್ಗೆ ಸೂಕ್ತರೀತಿಯಲ್ಲಿ

ನಡೆದುಕೊಳ್ಳಲಂ ತಿಳುವಳಿಕೆಯನ್ನು ಈಗಾಗಲೇ ಕೊಡಲಾಗಿದೆ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ತಾವು ಹೇಳಿದಹಾಗೆ ಶಾಸಕರೊಡನೆ ಸೂಕ್ತ ರೀತಿಯಲ್ಲಿ ಇರುವ ಹಾಗೆ ವಿಚ್ಛರಿಕೆಯನ್ನು ಕೊಡಲಾಗಿದೆ ಎಂದರೆ ಯಾವ ರೀತಿ ಇರಬೇಕೆಂದು ಹೇಳಿದ್ದೀರಿ ಅದರ ಬಗ್ಗೆ ವಿವರಣೆ ಕೊಡಿ. ಅವರನ್ನು ಶಾಸಕರು ಯಾವುದಾದರೂ ಸಾರ್ವಜನಿಕ ಕೆಲಸ ಮಾಡುವುದಕ್ಕೆ ಕೇಳಿ ಕೊಂಡಾಗ ಅವರು ಯಾವ ರೀತಿ ವರ್ತಿಸುತ್ತಾರೆ ಎನ್ನುವ ಉದಾಹರಣೆಯನ್ನು ನಾವು ಕೊಡ ಬೇಕಾಗುತ್ತದೆ. ಚರ್ಚೆಗೆ ರೆಡಿ ಇದ್ದರೆ ನಾವು ತಯಾರಾಗಿದ್ದೇವೆ. ಇತರೆ ಬಾಕಿ ಎಲ್ಲವನ್ನು ಒಪ್ಪುತ್ತಾರೆ ಶಾಸಕರಿಗೆ ಸವಾಲು ಹಾಕಿದ್ದನ್ನು ಡಿನೇ ಮಾಡುತ್ತಾರೆ. ಶಾಸಕರಿಗೆ ಸವಾಲು ಹಾಕಿದರು ಎನ್ನುವುದನ್ನು ಸುಳ್ಳು ಎಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಹುಲ್ಲು ಹಾಳಾದದ್ದು ನಿಜ. ಹುಲ್ಲು ಹಾಳು ಮಾಡಿದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ? ಹುಲ್ಲು ಸಂಗ್ರಹ ಮಾಡಲಿಕ್ಕೆ ಹಣ ಖರ್ಚುಮಾಡಿ ಸರ್ಕಾರದ ಬೊಕ್ಕಸಕ್ಕೆ ಹಾನಿ ಮಾಡಿದ್ದಾರೆ. ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ? ಹುಲ್ಲು ಸಂಗ್ರಹ ಮಾಡಲಿಕ್ಕೆ ಸರ್ಕಾರದ ಹಣವನ್ನು ಹಾಳು ಮಾಡಿಲ್ಲವೆಂದು ಹೇಳುತ್ತೀರೋ ಸ್ವಲ್ಪ ದಯವಾಡಿ ಏನು ಹೇಳುತ್ತೀರಿ ಹೇಳಿ ?

ಶ್ರೀ ವೀರಣ್ಣ.—ಗಮನ ಸೆಳೆದಿರುವುದು ಒಂದು ವಿಷಯದ ಬಗ್ಗೆ. ಶಾಸಕರ ರಾಜೀನಾಮೆ ಮತ್ತು ಸವಾಲಿನ ಬಗ್ಗೆ. ಅದರ ಬಗ್ಗೆ ವಿವರಣೆಯನ್ನು ಕೊಟ್ಟಿದ್ದೇವೆ. ತಹಶೀಲ್ದಾರರು ಏನು ಅವ್ಯವಹಾರ ಮಾಡಿದ್ದಾರೆ, ಮೇವು ಸಂಗ್ರಹದ ಪ್ರಶ್ನೆ ಇಲ್ಲಿಲ್ಲ. ಅದರ ಬಗ್ಗೆ ನಿರ್ದಿಷ್ಟವಾಗಿರತಕ್ಕ ವಿಷಯವನ್ನು ಹೇಳಿದರೆ ಯಾವ ಅಧಿಕಾರಿಯೇ ಆಗಿರಲಿ ಯಾವುದೇ ಮುಲಾಜಿಲ್ಲದೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಪತ್ರಿಕೆಯ ಅವರದೇ ಆದ ಹೇಳಿಕೆಯಲ್ಲಿ ೧೦ ಸಾವಿರ ರೂಪಾಯಿ ಹುಲ್ಲು ಹಾಳಾಗಿದೆಯೆಂದು ಅವರೇ ಹೇಳಿದ್ದಾರೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ? ಅದನ್ನಾದರೂ ಹೇಳಿ, ತನಿಖೆ ಮಾಡಿಸುತ್ತೀರಾ? ಇನ್ನೊಂದು ಸಲ ಹೊಸ ತನಿಖೆ ಮಾಡಿಸುವುದು ಬೇಡ.

ಅಧ್ಯಕ್ಷರು.—ಮಾನ್ಯಸದಸ್ಯರು ಹೇಳತಕ್ಕದ್ದು ೧೦ ಸಾವಿರ ರೂಪಾಯಿಗಳ ಹುಲ್ಲು ಹಾಳು ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಆ ಬಗ್ಗೆ ಏನು ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಆರ್. ಎನ್ ನಾಯಕ್.—ಪತ್ರಿಕೆಯಲ್ಲಿ ಬಂದಿರುವುದನ್ನು ಅವರೇ ಒಪ್ಪಿದ್ದಾರೆ. ಶಾಸಕರಿಗೆ ಸವಾಲು ಏಸೆದದ್ದು ಆ ಸುದ್ದಿ ನಾನು ಹೇಳಲಿಲ್ಲವೆಂದುಹೇಳುತ್ತಾರೆ. ಪತ್ರಿಕೆಗಳಿಗೆ ೧೦ ಸಾವಿರ ರೂಪಾಯಿಗಳ ಹುಲ್ಲು ಹಾಳಾಗಿದೆ ಎಂದು ಹೇಳುತ್ತಿದ್ದಾರೆ.ಆಪರ ಕಾರ್ಯವೈಖರಿಯಿಂದ ೧೦ ಸಾವಿರ ರೂಪಾಯಿಗಳ ಹುಲ್ಲು ಲಾಸ್ ಆಗಿದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಹಾಗಾದರೆ ಅವರನ್ನು ಏತಕ್ಕೆ ಸಸ್ಪೆಂಡ್ ಮಾಡಬಾರದು?

ಶ್ರೀ ವೀರಣ್ಣ.—ಏನಾದರೂ ಅವ್ಯವಹಾರ ಆಗಿದ್ದರೆ ವರದಿಯನ್ನು ತರಿಸಿಕೊಂಡು ಕಾನೂನು ಪ್ರಕಾರ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ...

ಶ್ರೀ ವೀರಣ್ಣ.—ಕಾಲಿಂಗ್ ಅಟೆನ್‌ಷನ್‌ನಲ್ಲಿ ಯಾರು ಸಹ ಮಾಡಿರುತ್ತಾರೆ ಅವರುಗಳು ಮಾತ್ರ ಪ್ರಸ್ತಾಪ ಮಾಡಬೇಕು ಮಧ್ಯೆ ಪ್ರವೇಶ ಮಾಡಿ ಬೇರೆಯವರು ವಿವರಗಳನ್ನುಕೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯಸಚಿವರು ತಮ್ಮ ವಾದವನ್ನು ಹೇಳಲಿ. ಇದು ಶಾಸಕರಿಗೆ ಸಂಬಂಧಪಟ್ಟ ವಿಚಾರ.

ಅಧ್ಯಕ್ಷರು.—ಸಚಿವರು ಹೇಳತಕ್ಕದ್ದು ಕಾಲಿಂಗ್ ಅಟೆನ್‌ಷನ್‌ಗೆ ಯಾರು ಸಹಿ ಹಾಕಿರುತ್ತಾರೆ ಅವರು ಮಾತ್ರ ವಿಷಯವನ್ನು ಪ್ರಸ್ತಾಪ ಮಾಡಬೇಕು ನೀವು ಎದ್ದು ಮಾತನಾಡಲಿಕ್ಕೆ ಅವಕಾಶವಿಲ್ಲ ವೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಶಾಸಕರ ವಿಚಾರ ಬಂದಾಗ ಕೆಲವು ನಿಯಮಗಳನ್ನು ಬದಿಗೊತ್ತಿ ಕೆಲಸ ಮಾಡಬೇಕಾದ ನೀತಿಯನ್ನು ಸಭಾಧ್ಯಕ್ಷರೇ ಮಾಡಬೇಕಾಗುತ್ತದೆ. ಅದನ್ನು ನೀವು ಮಾಡಿದ್ದೀರಿ. ಇದು ಹೊಸದೇನೂ ಅಲ್ಲ.

ಅಧ್ಯಕ್ಷರು.—ನೀವು ವಿರೋಧಪಕ್ಷದ ನಾಯಕರು ಆಗಿದ್ದರೆ ನಾನು ಅವಕಾಶ ಕೊಟ್ಟಿ ಕೊಡುತ್ತಿದ್ದೆ. ಮಾನ್ಯ ಮಂತ್ರಿಗಳ ತಕರಾರು ಏನೆಂದರೆ ಕಾಲಿಂಗ್ ಅಟೆನ್‌ಷನ್‌ಗೆ ಸಹಿ ಮಾಡಿದವರು ಮಾತ್ರ ಮಾತನಾಡ ಬೇಕೆಂದು ಹೇಳಂತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ತಕರಾರು ಇಲ್ಲ ಎಂದರೆ, ಈಗಲೂ ಮಾನ್ಯ ಮಂತ್ರಿಗಳ ತಕರಾರನ್ನು ಬದಿಗೊತ್ತಿ ನಾನು ಮಾತನಾಡಲಿಕ್ಕೆ ಅವಕಾಶ ಕೊಡಿ. ಶಾಸಕರ ವಿಚಾರ ಬಂದಾಗ ನಿಯಮಗಳನ್ನು ಬದಿಗೊತ್ತಿ ಪ್ರಸ್ತಾಪ ಮಾಡಬಹುದೆಂದು ಕಾನೂನು ಮಾಡಿ.

ಅಧ್ಯಕ್ಷರು.—ನೀವು ಈ ರೀತಿ ಮುಂಚೆ ಎದ್ದು ಎದ್ದು ಮಾತನಾಡಿದರೆ ಹೇಗೆ? ನೀವು ಮಾತನಾಡು ವುದಕ್ಕೆ ಬರುವುದಿಲ್ಲವೆಂದು ಮಂತ್ರಿಗಳು ತಕರಾರು ಎತ್ತಿದ್ದಾರೆ. ನೀವು ವಿರೋಧ ಪಕ್ಷದ ನಾಯಕ ರಾಗಿದ್ದರೆ ನಾನು ಅವಕಾಶ ಕೊಡುತ್ತಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಶಾಸಕರ ವಿಚಾರ ಬಂದಾಗ ನಾನು ಮಾತನಾಡಲೇಬೇಕಾಗುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ.—ಹಾಗಾದರೆ ಶಾಸಕರಿಗೆ ಹಕ್ಕು ಇಲ್ಲವೆ? ಶಾಸಕರು ಮಾತನಾಡು ವುದು ಬೇಡವೆ? ನೀವು ಹಾಗೆ ಹೇಳಿದರೆ ಹೇಗೆ?

ಅಧ್ಯಕ್ಷರು.—ತಾವು ಹಾಗೆ ಮಾತನಾಡಬಾರದು? ತಾವು ಮಾತನಾಡಬಾರದೆಂದು ಮಂತ್ರಿಗಳು ತಕರಾರು ಮಾಡುತ್ತಾರೆ. ನಿಮಗೆ ಮಾತನಾಡಲಿಕ್ಕೆ ಹಕ್ಕಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ನಮಗೆ ರಕ್ಷಣೆ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನಿಯಮಗಳ ಚೌಕಟ್ಟಿನೊಳಗೆ ಎಲ್ಲರಿಗೂ ರಕ್ಷಣೆಯನ್ನು ಕೊಡ ಬೇಕಾಗಂತ್ತದೆ. ನಿಯಮಗಳನ್ನು ಬಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಆಗಂವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗ ಸದಸ್ಯರು ಏನು ಹೇಳುತ್ತಾರೆ ಅದನ್ನು ಕೇಳಿ?

ಶ್ರೀ ಬಿ. ಸ್ವಾಮಿರಾವ್—ಮೂಲ ಪ್ರತಿಯಲ್ಲಿ...

ಶ್ರೀ ಡಿ. ಟಿ. ಜಯಕುಮಾರ್.—ಅವರಿಗೆ ಅವಕಾಶ ಕೊಟ್ಟರೆ ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು—ಎಲ್ಲರೂ ಕೂಡಿ, ಸ್ವಾಮಿರಾವ್ ತಾವು ಹೇಳಿ. ತಾವು ಸಹಿ ಹಾಕಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಶಾಸಕರ ಹಕ್ಕಿನ ವಿಚಾರ ಬಂದಾಗ ಸರ್ಕಾರಕ್ಕೆ ನಾನು ಎಚ್ಚರಿಕೆ ಯನ್ನು ಕೊಡುತ್ತಿದ್ದೇನೆ.

(ಗೊಂದಲ)

ಶ್ರೀ ವೀರಣ್ಣ.—ನೀವು ಒಂದು ನಿಮಿಷ ಯೀಲ್ಡ್ ಆಗುವುದಾದರೆ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ವೀರಣ್ಣ.—ನಾನು ಅವರ ಭಾವನೆ ಏನೆಂಬುದನ್ನು ಅರ್ಥಮಾಡಿಕೊಂಡಿದ್ದೇನೆ. ಇಲ್ಲಿರತಕ್ಕ ಪ್ರಶ್ನೆ ಯಾವುದೇ ಶಾಸಕರಿಗೆ ಅವಮಾನ ಮಾಡತಕ್ಕ ಪ್ರಶ್ನೆ ಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕೆ ಅಲ್ಲ?

ಶ್ರೀ ವೀರಣ್ಣ.—ನಾನು ಹೇಳುತ್ತೇನೆ; ಕೇಳಿ ಸ್ವಾಮಿ. ನಾನು ಹೇಳುವತನಕ ಕೇಳಿ,

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಕುಳಿತುಕೊಳ್ಳಿ

ಶ್ರೀ ವೀರಣ್ಣ.—ಪ್ರಶ್ನೆ ಇರತಕ್ಕದ್ದು, ಶಾಸಕರ ಹೇಳಿಕೆ ಏನೊಂದು ಪತ್ರಿಕೆಯಲ್ಲಿ ಬಂತು 'ಮೇವಿನ ಸಂಗ್ರಹದಲ್ಲಿ ಅವ್ಯವಹಾರ ಆಗಿದೆ ಎನ್ನತಕ್ಕ ಹೇಳಿಕೆಯನ್ನು ಶಾಸಕರು ಪತ್ರಿಕೆಗಳಿಗೆ ಕೊಟ್ಟರು'' ಯಾವರೀತಿಯಾದ ಅವ್ಯವಹಾರ ಆಗಿಲ್ಲ ಮತ್ತು ಅದನ್ನು ರುಜುವಾತು ಮಾಡಿದರೆ ರಾಜೀನಾಮೆ ಕೊಡಬೇಕು? ಅದರ ಬಗ್ಗೆ ಇರತಕ್ಕ ಪ್ರಶ್ನೆ ಮತ್ತು ಪ್ರತಿ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ. ನಾನು ಮೇವಿನ ಸಂಗ್ರಹಣೆಗೆ ಸಂಬಂಧ ಪಟ್ಟಂತ ಮಾಹಿತಿಗೆ ಮಾತ್ರ ಹೇಳಿಕೆ ಕೊಟ್ಟಿದ್ದೇನೆಯೇ ಹೊರತು ಶಾಸಕರ ಬಗ್ಗೆ ಯಾವುದೇ ರೀತಿ ಯಾದ ಹೇಳಿಕೆಯನ್ನು ಕೊಡಲಿಲ್ಲ, ರಾಜೀನಾಮೆಯನ್ನು ಕೊಡತಕ್ಕಂತಹ ಸವಾಲನ್ನು ಹಾಕಲಿಲ್ಲ ಎಂಬುದಾಗಿ ಅವರು ಹೇಳಿದ್ದಾರೆ. ಇರತಕ್ಕಂತಹ ಪ್ರಶ್ನೆ ಅದು. ಈ ರೀತಿ ಇರಬೇಕಾದರೆ ಬಹುಶ: ಶಾಸಕರ ವರ್ತನೆ ಬಗ್ಗೆಯಾಗಲಿ, ಅಥವಾ ಶಾಸಕರಿಗೆ ಅವರ ಸ್ಥಾನದ ಗೌರವಕ್ಕೆ ಅಗೌರವ ತೋರಿಸ ತಕ್ಕಂತಹ ಪ್ರಶ್ನೆ ನಮ್ಮ ಮುಂದೆ ಇಲ್ಲ. ಅವರು ಹೇಳಿದ್ದಾರೆ. ನಮ್ಮ ನಾಯಕರ್‌ರವರು ಅಲ್ಲಿ ಅವ್ಯವಹಾರ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರು ಅವ್ಯವಹಾರ ಮಾಡಿದ್ದರೆ ತಕ್ಷಣವೇ ತನಿಖೆ ಮಾಡಿ ಅವರ ಕ್ರಮ ತೆಗೆದುಕೊಳ್ಳುತ್ತೇವೆ. ಶಾಸಕರ ಬಗ್ಗೆ ಅವರ ಬಹಳ ಎಚ್ಚರದಿಂದ ವರ್ತನೆ ಮಾಡುತ್ತಿದ್ದಾರೆ. ಗೌರವ ಕೊಡತಕ್ಕಂತಹದ್ದರಲ್ಲಿ ಎರಡು ವಿಧ. ನಾವು ಅವರಿಗೆ ಮೊದಲು ಗೌರವ ಕೊಡಬೇಕು. You should give respect and take respect.

(ಗೊಂದಲ)

ಶ್ರೀ ಪಟಪಟಕ್ಕೆ ರತ್ನಾಕರ್.— ನಾವು ಯಾವ ರೀತಿಯ ಗೌರವ ಅವರಿಗೆ ಕೊಡಬೇಕು ?

ಶ್ರೀ ವೀರಣ್ಣ.— ಈ ರೀತಿಯಾಗಿರತಕ್ಕ ಗೌರವವನ್ನು ಕೊಡಬೇಕೆಂದು ಮಾಡಿಲ್ಲ. ಶಾಸಕರುಗಳು ಅಧಿಕಾರಿಗಳ ಹತ್ತಿರ ಹೋದರೆ ಅವರಿಗೆ ಎಲ್ಲಾ ರೀತಿಯಾದ ಗೌರವಯುತವಾಗಿ ಮಾತನಾಡತಕ್ಕಂತದ್ದು, ಅವರ ಸಮಸ್ಯೆಗಳನ್ನು ಕೇಳಿ ಇತ್ಯರ್ಥ ಮಾಡಬೇಕು ಎಂದು ಇರತಕ್ಕಂತಹದ್ದು ಇದೇ ರೀತಿಯಾಗಿ ನೋಡಿಕೊಳ್ಳಬೇಕೆಂಬ ಸೂಚನೆಯನ್ನು ಕೊಟ್ಟಿದ್ದೇವೆ. ಇಷ್ಟನ್ನು ಹೇಳಿದ ಮೇಲೂ ನಮ್ಮ ಸದಸ್ಯರಿಗೆ ಇನ್ನೇನು ಹೇಳಬೇಕೋ ನನಗಂತೂ ಅರ್ಥವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೆ ಒಂದು ನಿಮಿಷ.....

ಅಧ್ಯಕ್ಷರು.— ನಾನು ನಿಮಗೆ ಅವಕಾಶ ಕೊಡುವುದಿಲ್ಲ. ಮಾನ್ಯ ಸಚಿವರು ಕ್ಲೀಯರಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್ ಬಂಗಾರಪ್ಪ.— ಅವರ ಹೇಳಿಕೆಯನ್ನು ನಾನು ಕೇಳಿದ್ದೇನೆ. ಸಚಿವರು ಮಾತನಾಡುತ್ತಾ, ''We should give respect and take respect'' ಎಂದು ಹೇಳಿದರು ಆ ರೀತಿ ಅಲ್ಲ. He should give respect first and take respect. ನಾಳೆ ಶಾಸಕರು ಯಾರೇ ಆಗಿರಲಿ, ಸರ್ಕಾರಿ ಕಛೇರಿಗಳಿಗೆ ಹೋದಾಗ ಅಲ್ಲಿರತಕ್ಕಂತಹ ಅಧಿಕಾರಿ ಮೊದಲು ಎದ್ದು ನಿಲ್ಲಬೇಕು. That is why I quoted that circular. ನಾಳೇ ನೀವೂ ಸರ್ಕಾರಿ ಕಛೇರಿಗೆ ಸಾರ್ವಜನಿಕರ ಕೆಲಸಕ್ಕಾಗಿ ಹೋಗಬೇಕಾಗುತ್ತದೆ. ನೀವು ಸಚಿವರಾಗಿರಬಹುದು. ನಾಳೆ ಮತ್ತೊಂದು ಕಾಲ ಬರುತ್ತದೆ. ಸಾಮಾನ್ಯವಾಗಿ ಅಧಿಕಾರಿಗಳಿಗೆ ಶಾಸಕರಿಗೆ ಗೌರವವನ್ನು ಕೊಡ ಬೇಕೆಂಬುದರ ಬಗ್ಗೆ ಎಚ್ಚರಿಕೆ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಅದು ಸರಿ. ನೀವು ಆ ರೀತಿ ಹೇಳಿದ್ದರೂ, ಎಚ್ಚರಿಕೆಯನ್ನು ಕೊಟ್ಟಿದ್ದರೂ ಅವರು ಬಗ್ಗುವ ಹಾಗೆ ಇಲ್ಲ ಎನ್ನುವ ಅಭಿಪ್ರಾಯ ವನ್ನು ಮಾನ್ಯ ಸದಸ್ಯರು ವ್ಯಕ್ತ ಮಾಡಿದ್ದಾರೆ. ಅದಕ್ಕೋಸ್ಕರ ಪುಂಧ್ಯದಲ್ಲಿ ಬಾರು ಹಾಕ್ಕತಕ್ಕಂತಹ ತೀರ್ಮಾನವನ್ನು ನಾನು ಮಾಡಿದೆ. ನನಗೂ ಕೂಡ ಸಾರ್ವಜನಿಕರು ಅನೇಕ ದೂರುಗಳನ್ನು ಕೊಟ್ಟಿ ದ್ದಾರೆ. ಎಚ್ಚರಿಕೆ ಯಾವ ರೀತಿ ಕೊಡಬೇಕೆಂಬುದು ನಿಮಗೆ ಬಿಟ್ಟದ್ದು. ಯಾವುದೇ ಶಾಸಕರು ಕಛೇರಿಗಳಿಗೆ ಹೋದಾಗ ಅವರು ಹೇಳಿದಂತಹ ಕೆಲಸವನ್ನು ಮಾಡಿಕೊಡದಿದ್ದರೂ ಚಿಂತೆ ಇಲ್ಲ. ಕೊನ್ನೆಯ ಪಕ್ಷ ಅವರಿಗೆ ಗೌರವವನ್ನು ಅಧಿಕಾರಿಗಳು ಕೊಡುವಂತಹದ್ದು ಬಹಳ ಅವಶ್ಯಕ. ನಾನು ಎಲ್ಲಾ ಅಧಿಕಾರಿಗಳ ಬಗ್ಗೆ ಮಾತನಾಡುವುದಿಲ್ಲ. ಒಳ್ಳೆಯ ಅಧಿಕಾರಿಗಳೂ ಕೂಡ ಇದ್ದಾರೆ. ಹೇಗೆ

ಮಾತನಾಡಬೇಕು ? ಯಾವ ರೀತಿ ಗೌರವ ಕೊಡಬೇಕು. ಶಾಸಕರ ಹತ್ತಿರ ಯಾವ ರೀತಿ ಮಾತನಾಡ ಬೇಕೆಂಬುದನ್ನು ತಿಳಿದುಕೊಂಡಿರತಕ್ಕಂತಹ ಅಧಿಕಾರಿಗಳೂ ಇದ್ದಾರೆ. ಆ ರೀತಿ ಬಹಳ ಗರ್ವದಿಂದ ಮಾತನಾಡಿಸತಕ್ಕಂತಹ ಅಧಿಕಾರಿಗಳೂ ಇದ್ದಾರೆ. ಅವರ ವರ್ತನೆಯ ಬಗ್ಗೆ ಸರ್ಕಾರ ಬಹಳ ಎಚ್ಚರ ದಿಂದಿರಬೇಕು. ೧೦ ಸಾವಿರ ರೂಪಾಯಿಗಳ ಬೆಲೆ ಬಾಳುವ ಮೇವು ಹಾಳಾಗಿದೆ ಎಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ಉತ್ತರ ಕೊಡಿ.

ಶ್ರೀ ಆರ್. ಎಲ್. ಜಾಲಪ್ಪ.— ಈಗಾಗಲೇ ಸನ್ಮಾನ್ಯ ಸಚಿವರು ಸೂಕ್ತವಾದ ಉತ್ತರವನ್ನು ಕೊಟ್ಟಿದ್ದಾರೆ. ಮುತ್ತು ಯಾವುದೇ ವಿಧದಲ್ಲೂ ಯಾವ ಶಾಸಕರಿಗೇ ಆಗಲೀ ಅವರಿಗೆ ಅವಮಾನ ಮಾಡುವ ಹಾಗೆ ನಮ್ಮ ಅಧಿಕಾರಿಗಳಿಗೆ ಉತ್ತೇಜನ ಕೊಡುತ್ತೀರಿ ಎಂಬುದು ತಪ್ಪು ಅಭಿಪ್ರಾಯ. ಈಗಾಗಲೇ ನಾಲ್ಕಾರುಸಲ ಅವರಿಗೆ ಸೂಚನೆಗಳನ್ನು ಕೊಟ್ಟಿದ್ದೇವೆ. ಪ್ರಜಾಪ್ರತಿನಿಧಿಗಳು ಬಂದಾಗ ಅವರಿಗೆ ಸರಿಯಾಗಿ ಗೌರವವನ್ನು ಕೊಡಬೇಕು, ಎದ್ದು ನಿಂತು ಮಾತನಾಡಬೇಕು, ಅವರ ಕಷ್ಟಗಳು ಏನಿವೆ ಎಂಬುದನ್ನು ವಿಚಾರಿಸಿ ಸರಿಯಾದ ತೀರ್ಮಾನ ಕೈಗೊಳ್ಳಬೇಕು. ಎಂದು ಹೇಳಿದ್ದೇವೆ. ಅದು ತಮಗೂ ಗೊತ್ತಿದೆ. ತಮ್ಮ ಸರ್ಕಾರ ಇದ್ದಾಗಲೂ ಅದೇ ಕೆಲಸ ಮಾಡಿದ್ದೀರಿ. ನಮ್ಮ ಸರ್ಕಾರ ಬಂದ ಮೇಲೂ ಎಲ್ಲಾ ಕಡೆ ಇದನ್ನೇ ಹೇಳಿದ್ದೇವೆ. ತಹಸೀಲ್ದಾರ್‌ರವರು ಒಂದು ಪತ್ರಿಕಾ ಹೇಳಿಕೆ ಯನ್ನು ಕೊಟ್ಟಿದ್ದಾರೆ. ನಾನು ತಪ್ಪು ಮಾಡಿದ್ದರೆ, ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲ ನೀವು ತಪ್ಪು ಮಾಡಿದ್ದರೆ ನೀವು ರಾಜೀನಾಮೆ ಕೊಡಿ ಎಂದು ಹೇಳಿದ್ದಾರೆ ಎಂದು ಅದನ್ನು ಅಷ್ಟಕ್ಕೆ ಬಿಡೋಣ. ಎರಡನೆಯದಾಗಿ ೧೦ ಸಾವಿರ ರೂಪಾಯಿಗಳು ದುರ್ವ್ಯವಹಾರ ಎಂದು ಹೇಳಲಿಲ್ಲ. ಅವರ ಅಸಡ್ಡೆತನದಿಂದ ೧೦ ಸಾವಿರ ರೂಪಾಯಿಗಳ ಮೇವು ಹಾಳಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾವು ಜಿಲ್ಲಾಧಿಕಾರಿಗಳಿಗೆ ಬರೆದು ಅದು ನಿಜವಾಗಿದ್ದರೆ, ಅವರ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳೋಣ. ಅದನ್ನು ಅಷ್ಟಕ್ಕೆ ಬಿಡೋಣ. ಇದನ್ನು ಇನ್ನೂ ಹೆಚ್ಚು ಹೊತ್ತು ಮಾತನಾಡುವುದು ಅನಾವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ೩ಳಿ ೩ಳಿಳಿರ ಮೇಲೆ ನೋಟೀಸ್‌ಗಳು ಇವೆ. ದಯಮಾಡಿ ಮುಂದಕ್ಕೆ ಹೋಗೋಣ ಎಂಬುದಾಗಿ ನಮ್ಮ ಸ್ನೇಹಿತರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಉಮರಬ್ಬ.— ಮಾನ್ಯ ಅಧ್ಯಕ್ಷರೇ, ತಹಸೀಲ್ದಾರ್ ಅವರು ಏನು ಹೇಳಿಕೆ ಕೊಟ್ಟಿದ್ದಾರೆ ಎನ್ನುವುದು ನಮ್ಮ ಪ್ರತಿಷ್ಠಿತ ಕನ್ನಡ ಪ್ರಭಾ ಪತ್ರಿಕೆಯಲ್ಲಿ ದೊಡ್ಡ ಅಕ್ಷರಗಳಲ್ಲಿ ಬಂದಿದೆ. ಅದನ್ನು ಇಲ್ಲಿ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಪತ್ರಿಕೆಯಲ್ಲಿ ವರದಿ ತಪ್ಪಾಗಿ ಪ್ರಕಟವಾಗಿದೆ ಎಂಬುದಾಗಿ ಹೇಳಿದ್ದಾರೆ. ಇದರಲ್ಲಿ ೨ ಪ್ರಶ್ನೆಗಳು ಉದ್ಭವವಾಗುತ್ತವೆ ಒಂದು ಅವರು ಕೊಟ್ಟರುವುದೇ ತಪ್ಪಾಗಿದೆಯೋ ಅಥವಾ ಪತ್ರಿಕೆಯಲ್ಲಿರುವಂತಹ ವರದಿಗಾರ ತಪ್ಪು ಮಾಡಿದ್ದಾನೋ ಏನೋ ? ಹೀಗಿದ್ದೂ ವರದಿಗಾರ ತಪ್ಪಾಗಿ ಇಂತಹ ಒಂದು ದೊಡ್ಡ ಸುದ್ದಿಯನ್ನು ಹಾಕಿ ಶಾಸಕರಿಗೆ ಅಪಮಾನ ಮಾಡುವಂತಹ ಸುದ್ದಿಯನ್ನು ಪ್ರಕಟ ಮಾಡಿದ್ದರೆ, ಅದು ವರದಿಗಾರನ ಪಾಲಿಗೆ ತಪ್ಪಾಗುತ್ತದೆ. ಪತ್ರಿಕಾ ಧರ್ಮಕ್ಕೆ ಅಪಚಾರ ಎಸಗಿದಂತಹ ಕೆಲಸವನ್ನು ಮಾಡಿದ ಹಾಗೆ ಆಗುತ್ತದೆ. ಇದೂ ಒಂದು ಪ್ರಶ್ನೆ ಅಥವಾ ಪತ್ರಿಕಾ ಪ್ರಕಟಣೆ ತಪ್ಪು ಎನ್ನುವ ಅಭಿಪ್ರಾಯಕ್ಕೆ ಸಚಿವರು ಬಂದಿದ್ದಾರೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಎರಡನೆಯದಾಗಿ ೧೦ ಸಾವಿರ ರೂಪಾಯಿಗಳ ನಷ್ಟಕ್ಕೆ ತಹಸೀಲ್ದಾರ್ ತಾನೇ ಹೊಣೆಗಾರ ಎಂಬುದಾಗಿ ಒಪ್ಪಿಕೊಂಡಿದ್ದಾನೆ. ಅವರನ್ನು ಕೂಡಲೇ ಅಮಾನತ್ತಿ ನಲ್ಲಿಡಬೇಕು. Suspension is not a punishment. ದಯಮಾಡಿ ಅವರ ಬಗ್ಗೆ ವಿಚಾರಣೆ ಮಾಡಿ ಎಂಬುದಾಗಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೀರಣ್ಣ.— ಇದಕ್ಕೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಆರ್. ಎನ್. ನಾಯಕ್.— ಅದು ಹೇಗೆ ಹೇಳುತ್ತೀರಿ ?

(ಗೊಂದಲ)

ಶ್ರೀ ಬಿ. ಎ. ಉಮರಬ್ಬ.— ಹೊಸನಗರ ಶಾಸಕರಿಗೆ ತಹಸೀಲ್ದಾರ್‌ರವರ ಸವಾಲು ಎಂದು ದೊಡ್ಡ ಸುದ್ದಿ ವರದಿಯಾಗಿದೆ. ಇದು ಯಾವ ವರದಿಯ ಆಧಾರದ ಮೇಲೆ ಹೇಳಿದ್ದಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು.— ವಿಚಾರಣೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಅವರು ಮಾಡಿದ್ದುದು ಸರಿಯಲ್ಲ ಏನ್ನುವುದನ್ನೂ ಕೂಡ ಹೇಳಿದ್ದಾರೆ. ಮುಂದೆ ಅದನ್ನು ವಿಚಾರಣೆ ಮಾಡುತ್ತೇನೆ. ಎಂದು ಕೂಡ ಹೇಳಿದ್ದಾರೆ. ಇನ್ನೇನು ಬೇಕು ?

SRI. B. A. UMARABBA.— If it is proved that it is a written statement made by the concerned Tahsildar, what action are you going to take against him ?

ಶ್ರೀ ಆರ್. ಎಲ್. ಜಾಲಪ್ಪ.— ಇನ್ನೇನು ಹೇಳಬೇಕು ? ಈಗಾಗಲೇ ಎಲ್ಲವನ್ನೂ ಹೇಳಿದ್ದಾರೆ ಇದರ ಮೇಲೆ ಇನ್ನೂ ವ್ಯಾಖ್ಯಾನ ನಡೆಸಿಕೊಂಡು ಹೋಗುವುದು I don't think it is proper.

ಶ್ರೀ ಬಿ. ಸ್ವಾಮಿರಾವ್.— ಹೊಸನಗರದಲ್ಲಿ ಎಲ್ಲಾ ಕಡೆ ಒಟ್ಟೊಟ್ಟಾಗಿ ಬರಗಾಲಕ್ಕೋಸ್ಕರ ದಾನಿಗಳಿಂದ ಹಾಗೂ ಕಾಡಿನಿಂದ ಸಂಗ್ರಹಿಸಿದ ಹುಲ್ಲನ್ನು ಒಟ್ಟಾಗಿ ಇಡಲಿಲ್ಲ. ನೂರಾರು ಲಾರಿ ಲೋಡ್ ಹುಲ್ಲನ್ನು ನೂರಾರು ಕಡೆ ಇಟ್ಟಿದ್ದರಿಂದ ಇದು ಹಾಳಾಗಿ ಹೋಗಿದೆ. ಅಲ್ಲಿಗೆ ಕಳೆದ ಮೇ ೫ನೇ ತಾರೀಖು ಅಂದು ಕೃಷಿ ಮಂತ್ರಿಯಾಗಿದ್ದಂತಹ ಶ್ರೀಮಾನ್ ಎಂ. ಪಿ. ಪ್ರಕಾಶ್‌ರವರು ಬಂದಿದ್ದರು. ಆಗ ನಾನು ಇದನ್ನು ಒಟ್ಟಾಗಿ ಇಡಬೇಕು. ಇಲ್ಲದಿದ್ದರೆ ಇದು ಹಾಳಾಗುತ್ತದೆಂದು ಮಲೆನಾಡಿನವನಾದ ನಾನು ಸರ್ಕಾರಕ್ಕೆ ಮತ್ತು ಸಚಿವರಿಗೆ ಆಗಲೇ ಮುನ್ಸೂಚನೆ ಕೂಡ ಕೊಟ್ಟಿದೆ. ನೂರಾರು ಲಾರಿ ಹುಲ್ಲು ಇವತ್ತು ಕೊಳೆತು ಹೋಗಿ ಹೊಸನಗರ ಪಟ್ಟಣದಲ್ಲಿ ಕೆಟ್ಟ ವಾಸನೆ ಬರುತ್ತಿದೆ. ಇದರ ಬಗ್ಗೆ ಅಂದೇ ತಹಸೀಲ್ದಾರ್‌ರವರಿಗೂ ಕೂಡ ಎಚ್ಚರಿಕೆಯನ್ನು ನಾನು ಕೊಟ್ಟಿದ್ದೆ. ಈಗ ಸಂಗ್ರಹಿಸಿರುವಂತಹ ಹುಲ್ಲನ್ನು ಕ್ರಮವಾಗಿ ಕೂಡಿ ಎಂದು ಹೇಳಿದ್ದೆ. ಆವರು ಕೂಡಲಿಲ್ಲ. ಸಿಕ್ಕಾ ಪಟ್ಟೆ ಎಲ್ಲೆಲ್ಲೂ ಬೀಸಾಕಿದ್ದರಿಂದ ಅದು ಹಾಳಾಗಿ ಹೋಗಿದೆ. ಕ್ರಮವಾಗಿ ಕೂಡಿಟ್ಟರೆ ಮಲೆನಾಡಿನಲ್ಲಿ ಎಷ್ಟೇ ಮಳೆ ಬಂದರೂ ಮೂರು ವರ್ಷ ೪ ವರ್ಷಗಳವರೆಗೆ ಹುಲ್ಲನ್ನು ಹಾಳಾಗದಂತೆ ಇಡುವುದಕ್ಕೆ ಸಾಧ್ಯ ಇದೆ ಅದರ ಬಗ್ಗೆ ಈ ಬಂದು ಆಪಾದನೆಯನ್ನು ನಾನು ತಹಸೀಲ್ದಾರ್‌ರವರ ಮೇಲೆ ಹೊರಿಸಿದ್ದೆ. ಆದರೆ ಈ ತಹಸೀಲ್ದಾರ್ ಆ ಕೆಲಸವನ್ನು ಮಾಡಿಲ್ಲ ಮೇವನ್ನು ಸರಿಯಾದ ರೀತಿಯಲ್ಲಿ ಕೂಡಿಟ್ಟಿಲ್ಲ ವೆಂದು ನಾನು ಈ ಹೇಳಿಕೆ ಕೊಟ್ಟಿದ್ದೇನೆ. ಇದಕ್ಕೆ ಆ ತಹಸೀಲ್ದಾರ್‌ರವರು ಈ ತರಹ ಸವಾಲನ್ನು ಹಾಕಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಹೇಳಿಕೆಯು ಪತ್ರಿಕೆಯಲ್ಲಿ ಬಂದ ಮೇಲೆ ನಾನು ತುಮ್ಮ ಕೊಠಡಿಗೆ ಬಂದು ಒಬ್ಬ ತಹಸೀಲ್ದಾರ್ ವಿಧಾನಸಭಾ ಸದಸ್ಯನಾದ ನನ್ನ ಮೇಲೆ ಸವಾಲ್ ಹಾಕಿ ರಾಜೀನಾಮೆ ಕೊಡುವುದಕ್ಕೆ ಒತ್ತಾಯಿಸಿದ್ದಾರೆಂದು ತಮ್ಮಲ್ಲಿ ಕೇಳಿಕೊಂಡಿದ್ದೆ ಅಧ್ಯಕ್ಷರೇ ನಿಮ್ಮಲ್ಲಿ ಕೇಳಿ ಕೊಂಡ ಮೇಲೆ ಒಂದು ಪತ್ರವನ್ನು ಮುಖ್ಯ ಮಂತ್ರಿಯವರಿಗೆ ಬರೆದಿದ್ದೇನೆ. ಅದರ ನಕಲನ್ನು ರೆವಿನ್ಯೂ ಮಂತ್ರಿಗಳಿಗೆ, ರೆವಿನ್ಯೂ ಕಮೀಷನರ್‌ರವರಿಗೆ, ಮುಖ್ಯ ಕಾರ್ಯದರ್ಶಿಯವರಿಗೆ ಮತ್ತು ಡಿವಿಜನಲ್ ಕಮೀಷನರ್‌ರವರಿಗೆ ಹಾಗೂ ಡೆಪ್ಯುಟಿ ಕಮೀಷನರ್‌ರವರಿಗೆ ಕಳುಹಿಸಿದ್ದೇನೆ. ನಾನು ಅದನ್ನು ಈ ಸದನ ದಲ್ಲಿ ಓದುತ್ತೇನೆ. ತಾವು ಸಾವಕಾಶವಾಗಿ ಕೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ಈಗ ಅವರು ಈ ಸದನದಲ್ಲಿ ಓದುವ ಅವಶ್ಯಕತೆ ಇಲ್ಲ. ಅದನ್ನು ಇಲ್ಲಿ ಓದಬಾರದು. ತಹಸೀಲ್ದಾರ್‌ರವರು ಇವರ ರಾಜೀನಾಮೆಗೆ ಒತ್ತಾಯಿಸಿಲ್ಲವೆಂದು ಡಿನೇ ಮಾಡಿದ್ದಾರೆ ಆದ್ದರಿಂದ, ಆ ಪತ್ರವನ್ನು ಇಲ್ಲಿ ಓದಬಾರದು. ತಾವು ಇದಕ್ಕೆ ಅವಕಾಶ ಕೊಡುವುದಾದರೆ ಸದನಕ್ಕೆ ಒಳ್ಳೆಯ ಗೌರವ ಬರುವುದಿಲ್ಲ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಅಧ್ಯಕ್ಷರೇ,

ಶ್ರೀ ಬಿ. ಸ್ವಾಮಿರಾವ್.— ಅಧ್ಯಕ್ಷರೇ, ನಾನು ಇದನ್ನು ಓದುತ್ತೇನೆ.

ಅಧ್ಯಕ್ಷರು.— ನೀವು ಏಕೆ ಸುಮ್ಮನೆ ಓದುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.— ನಾವು ಯಾವುದೇ ಅಧಿಕಾರಿಯನ್ನು ರಕ್ಷಣೆ ಮಾಡುವ ಉದ್ದೇಶ ನಮಗಿಲ್ಲ. ಇದನ್ನು ಖಡಾಖಂಡಿತವಾಗಿ ಹೇಳುತ್ತೇನೆ. ಹುಲ್ಲನ್ನು ಸರಿಯಾಗಿ ಜೋಪಾನ ಮಾಡಿಲ್ಲ. ಇದರಲ್ಲಿ ದುರ್ವ್ಯವಹಾರ ನಡೆದಿದೆ, ಹುಲ್ಲು ಹಾಳಾಗುವುದಕ್ಕೆ ತಹಶೀಲ್ದಾರ್‌ರವರ ನೆಗ್ಲಿಜೆನ್ಸ್ ಕಾರಣ ಎಂದು ಹೇಳಿದ್ದಾರೆ. ಅದರ ಬಗ್ಗೆ ತನಿಖೆ ಮಾಡಲು ಜಿಲ್ಲಾಧಿಕಾರಿಗೆ ಪತ್ರ ಬರೆದು ತಿಳಿಸಿದ್ದೇವೆ. ಜಿಲ್ಲಾಧಿಕಾರಿಗಳ ವರದಿ ಕೊಟ್ಟ ಮೇಲೆ, ಅದರಲ್ಲಿ ಯಾರು ತಪ್ಪಿತಸ್ಥರಿದ್ದಾರೋ ಅಂತಹ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುತ್ತೇವೆ. ಡಿಸ್‌ಮಿಸ್ ಮಾಡಬೇಕಾಗಿ ಬಂದರೂ ಅದನ್ನೂ ಮಾಡುತ್ತೇವೆ. ಈಗ ಈ ವಿಷಯವನ್ನು ಇಲ್ಲಿಗೇ ಮುಗಿಸಿ ಮುಂದಿನ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.— ದಯವಿಟ್ಟು ಈಗ ತಾವು ಕುಳಿತುಕೊಳ್ಳಿ. ಇದು ಕಾಲಿಂಗ್ ಅಟೆನ್‌ಷನ್.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಯಾವ ನಿಯಮದ ಪ್ರಕಾರ ಇವರು ಅದನ್ನು ಓದಬೇಕು ಎಂದು ಕೇಳುತ್ತಿದ್ದಾರೋ ಗೊತ್ತಿಲ್ಲ. ಕಾಲಿಂಗ್ ಅಟೆನ್‌ಷನ್ ಮೇಲೆ ಉತ್ತರವನ್ನು ಕೊಟ್ಟಾಗಿದೆ. ಈಗ ಇವರು ಎಕ್ಸ್‌ಪ್ಲನೇಷನ್ ಕೊಡುವುದು ಅನಾವಶ್ಯಕ. ಇವರು ಕಾಲಿಂಗ್ ಅಟೆನ್‌ಷನ್‌ಗೆ ಸಿಗ್ನೇಟರಿಯೂ ಅಲ್ಲ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಸರ್ಕಾರ ತನಿಖೆ ಮಾಡುವುದಕ್ಕೆ ಒಪ್ಪಿಕೊಂಡಿದೆ. ಈಗಾಗಲೇ ಜಿಲ್ಲಾಧಿಕಾರಿಗೆ ಪತ್ರ ಬರೆದು ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಸರ್ಕಾರ ಆದೇಶ ಕೊಟ್ಟಿದೆ. ತನಿಖೆಯಾದ ನಂತರ ತಪ್ಪಿತಸ್ಥ ಅಧಿಕಾರಿಗೆ ಸೂಕ್ತ ಶಿಕ್ಷೆ ಕೊಡಲಾಗುತ್ತದೆ ಎಂದು ಹೇಳಿದರೂ ಇವರು ಗಲಾಟೆ ಮಾಡುವುದು ಏಕೆ ?

ಶ್ರೀ ಬಿ. ಸ್ವಾಮಿರಾವ್.— ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಆ ತಹಶೀಲ್ದಾರ್‌ರವರು, ಹುಲ್ಲನ್ನು ಬೇಕಾಗಿಯೇ ಹಾಳು ಮಾಡಿದ್ದಾರೆ. ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಇದರ ಬಗ್ಗೆ ೨೦ ದಿನಗಳ ಹಿಂದೆಯೆ ಸರ್ಕಾರಕ್ಕೆ ದೂರು ಕೊಟ್ಟಿದ್ದರೂ ಕೂಡ ಎನ್‌ಕ್ವೈರಿಯನ್ನು ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು — ಮಾನ್ಯ ಬಂಗಾರಪ್ಪನವರೇ, ತಾವು ದಯವಿಟ್ಟು ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಈಗಲೂ ಅವರು ಬರೆದು ಕಳುಹಿಸಲಿ. ನಾನು ಮಂತ್ರಿಯವರಿಗೆ ಕಳುಹಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.— ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.— ನಿಮ್ಮ ಬಗ್ಗೆ ಕಳಕಳಿ ಇದೆ. ಆದರೆ ನಮಗೆ ಮಾತನಾಡಲು ತಾವು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಹೀಗಾದರೆ ಸಭೆ ನಡೆಸುವುದಕ್ಕಾಗುವುದಿಲ್ಲ ಅಧ್ಯಕ್ಷರೆ.

ಅಧ್ಯಕ್ಷರು.— ಈಗ ಕಾಲಿಂಗ್ ಅಟೆನ್‌ಷನ್ ವಿಷಯ ಕ್ಲೋಸ್ ಆಗಿದೆ.

ಶ್ರೀ ಎಸ್. ಬಂಗಾರಪ್ಪ.— ಬರೀ ಅವಕಾಶಕ್ಕೋಸ್ಕರ ನಾವು ಇಲ್ಲಿ ಬಂದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ಸ್ವಾಮಿ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು.— ತಾವು ಎಲ್ಲರೂ ಕುಳಿತುಕೊಳ್ಳಿ, ತಾವು ಕುಳಿತುಕೊಳ್ಳಿ. ಈಗ ಕಾಲಿಂಗ್ ಅಟೆನ್ಷನ್ ವಿಷಯ ಕ್ಲೋಸ್ ಆಯಿತು. ಏನಾದರೂ ಇದ್ದರೆ ಬರೆದು ಕಳುಹಿಸಿ ಅದನ್ನು ಮಂತ್ರಿಯವರಿಗೆ ನಾನು ಕಳುಹಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.— ಈಗಲೇ ಬೇಕಾದಷ್ಟು ಟೈಮ್ ಆಗಿಬಿಟ್ಟಿದೆ.

(ಗೊಂದಲ)

ಅಧ್ಯಕ್ಷರು.— ಯಾರೂ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.— ನೀವು ಹೇಳಿದ್ದೂದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ಸನ್ಮಾನ್ಯ ಬಂಗಾರಪ್ಪನವರು ಮಂತ್ರಿಗಳಾಗಿದ್ದವರು, ಹಾಗೂ ವಿರೋಧ ಪಕ್ಷದ ನಾಯಕರಾಗಿದ್ದವರು. ಇವರು ಈ ವಿಷಯಕ್ಕೆ ಬೆಂಬಲ ಕೊಡುವುದನ್ನು ನೋಡಿದರೆ ಇದು ನಮ್ಮ ದುರಾದೃಷ್ಟ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಇದು ಡಿಸಿಪ್ಲೀನಾ ? ಅಧ್ಯಕ್ಷರೆ ?

ಅಧ್ಯಕ್ಷರು.— ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.— ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಬಂಗಾರಪ್ಪನವರೇ, ಈ ವಿಷಯವನ್ನು ಇಲ್ಲಿಗೇ ಮುಂಕ್ತಾಯ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಕೊನೆಯಲ್ಲಿ ಹೇಳಿದ್ದೇನೆ.....

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಜಾಲಪ್ಪನವರೇ ತಾವೂ ಕುಳಿತುಕೊಳ್ಳಿ. ಇಷ್ಟೂ ಹೊತ್ತು ಚರ್ಚೆಯಾಗಿದೆ. ಮಂತ್ರಿಗಳೂ ಆಗಲೇ ಉತ್ತರವನ್ನೂ ಕೊಟ್ಟಿದ್ದಾರೆ.

(ಗೊಂದಲ)

೨-೦೦ ಪಿ. ಎಂ.

ಅಧ್ಯಕ್ಷರು.—ಈಗ ಯಾರು ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವಂತಿಲ್ಲ.

ಶ್ರೀ ಎಂ. ವಂಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರೇನಾದರೂ ಗಮನ ಹರಿಸಬೇಕಾದರೆ ನೇರವಾಗಿ ಎದ್ದುನಿಂತು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಮಾತನಾಡಲಿ. ನಾಚಿಕೆಗೇಡು, ಈ ರೀತಿಯಲ್ಲಿ ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಮುಂತ್ತಣ್ಣನವರೇ ತಾವು ಕಳುಹಿಸಿರುವ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬಹುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಜಾಲಪ್ಪನವರು ಮಾತನಾಡುತ್ತಾ ಹೇಳಿದರು, ನಮ್ಮ ಹತ್ತಿರವೇ ಸದಸ್ಯರು ಈ ರೀತಿ ವರ್ತನೆ ಮಾಡಿದರೆ ಇನ್ನು ಅಧಿಕಾರಿಗಳ ಹತ್ತಿರ ಯಾವ ರೀತಿ ಮಾತನಾಡುತ್ತಾರೆಂದು,

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಮಾನ್ಯ ಸಚಿವರಾದ ಬಸವಣ್ಣಪ್ಪನವರು ಉತ್ತರವನ್ನು ಕೊಡಲು ಎದ್ದು ನಿಂತಿರುತ್ತಾರೆ. ದಯವಿಟ್ಟು ಅವರ ಉತ್ತರ ಕೇಳಿ.

(ಗೊಂದಲ)

V. ನಾಯಕ ಗುಂಪಿನ ಪರಿಶಿಷ್ಟ ವರ್ಗದವರಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ.

(ಗೊಂದಲದಲ್ಲಿಯೇ ಶ್ರೀ ಡಿ.ಟಿ. ಜಯಕುಮಾರ್‌ರವರು ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಾರೆ)

ಶ್ರೀ ಜಿ. ಬಸವಣ್ಣಪ್ಪ(ಸಮಾಜ ಕಲ್ಯಾಣ ಇಲಾಖಾ ಸಚಿವರು).—ಪರಿಶಿಷ್ಟ ಜಾತಿ ಮಂತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಕೇಂದ್ರ ಸರ್ಕಾರದ ದಿನಾಂಕ ೨೨-೩-೧೯೭೭ರ ಪತ್ರಾಂಕ ಬಿಸಿ.-೧೨೦೨೦ : ಎಸ್ : ೭೬- ಎಸ್‌ಸಿಟಿ(೧) ಹಾಗೂ ಈ ಬಗ್ಗೆ ಆಗಿಂದ್ಹಾಗ್ಗೆ ಹೊರಡಿಸಲಾದ ಸೂಚನೆಗಳನ್ವಯ ಜಾತಿ ಪ್ರಮಾಣ ಪತ್ರಗಳನ್ನು ಕೊಡಲಾಗುತ್ತಿದೆ. ಈ ಪತ್ರದಲ್ಲಿ ಸಂವಿಧಾನದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆದೇಶ ೧೯೫೦ರ ಅನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಕೊಡಬೇಕಾದ ಜಾತಿ ಪ್ರಮಾಣ ಪತ್ರಗಳ ಫಾರಂನ್ನು ಕೇಂದ್ರ ಸರ್ಕಾರದ ನಿಗದಿ ಪಡಿಸಿದ ಅಂದರೆ ಕೇಂದ್ರ ಸರ್ಕಾರದ ದಿನಾಂಕ ೨೭-೭-೧೯೭೭ರ ನೋಟಿಫಿಕೇಷನ್‌ನಲ್ಲಿ ಸೇರಿರುವ ಪರಿಶಿಷ್ಟ ಜಾತಿ ಮಂತ್ತು ಪರಿಶಿಷ್ಟ ಪಂಗಡಗಳವರಿಗೆ ಮಾತ್ರ ನಿಗದಿಪಡಿಸಿರುವ ಫಾರಂನ್ನು ಉಪಯೋಗಿಸಬಹುದು. ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸಿರುವ ಅಂತಿಮ ನಿರ್ಧಾರ ಕೇಂದ್ರ ಸರ್ಕಾರಕ್ಕೆ ಸೇರಿದ್ದು.

ರಾಜ್ಯ ಸರ್ಕಾರವು ಬೇಡ, ವಾಲ್ಮೀಕಿ, ನಾಯಂಕ್, ನಾಯ್ಕ ಪರಿವಾರ ಮತ್ತು ತಳವಾರ ಜಾತಿಗಳನ್ನು ''ನಾಯಕ'' ಪಂಗಡದ ಪರ್ಯಾಯ ಪದಗಳೆಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಆದರೆ ಈವರೆವಿಗೂ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಪರಿಶಿಷ್ಟ ವರ್ಗದ ನೋಟಿಫಿಕೇಷನ್‌ನ್ನು ತಿದ್ದುಪಡಿಮಾಡಲು ಕ್ರಮ ಕೈಗೊಂಡಿಲ್ಲ. ಹಾಗೂ ಈ ಜಾತಿಗಳು ನಾಯಕ ಪಂಗಡದ ಪರ್ಯಾಯ ಜಾತಿಗಳೆಂದು ಘೋಷಿಸಿಲ್ಲ. ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವವರೆಗೂ ಈ ಜಾತಿಗಳಿಗೆ ಸಂವಿಧಾನದ ಪರಿಶಿಷ್ಟ ವರ್ಗಗಳ ಆದೇಶ ೧೯೫೦ ರನ್ವಯ ಜಾತಿ ಪ್ರಮಾಣ ಪತ್ರಗಳನ್ನು ಕೊಡಲು ಸಾಧ್ಯವಿಲ್ಲ. ಅಂದರೆ ಫಾರಂ ನಂ(೨)ರಲ್ಲಿ ಕೊಡಲು ಸಾಧ್ಯವಿಲ್ಲ. ಆದಾಗ್ಯೂ, ಸರ್ಕಾರ ಈ ಜಾತಿಗಳಿಗೆ ಸೇರಿದವರಿಗೆ ಪರಿಶಿಷ್ಟ ವರ್ಗದವರಿಗೆ ಲಭ್ಯವಿರುವ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸಿರುವುದರಿಂದ ಜಾತಿ ಪ್ರಮಾಣ ಪತ್ರಗಳನ್ನು ಕೊಡಲು ಅಧಿಕಾರ ಹೊಂದಿರುವ ಅಧಿಕಾರಿಗಳಿಗೆ ಈ ಜಾತಿಗಳಿಗೆ ಸೇರಿದವರಿಗೆ ಫಾರಂ ನಂ (೨) ರಲ್ಲಿ ಈವರೆವಿಗೆ ಕೊಡುತ್ತಿದ್ದಂತೆಯೇ ಜಾತಿ ಪ್ರಮಾಣ ಪತ್ರಗಳನ್ನು ಕೊಡಬೇಕೆಂದು ಸೂಚನೆ ಕೊಡಲಾಗಿದೆ. ಶೈಕ್ಷಣಿಕ ಸೌಲಭ್ಯಗಳನ್ನು ಮಂಜೂರು ಮಾಡುವ ಅಧಿಕಾರಿಗಳು ಪರಿಶಿಷ್ಟ ವರ್ಗಕ್ಕೆ ಲಭ್ಯವಿರುವ ಶಿಕ್ಷಣ ಸಂಸ್ಥೆಗಳಲ್ಲಿ ವಿಶಾಲವಾತಿ ಮತ್ತು ಶೈಕ್ಷಣಿಕ ರಿಯಾಯಿತಿಗಳನ್ನು ಮಂಜೂರು ಮಾಡುವರು.

ಎರಡನೇಯದಾಗಿ ದಿನಾಂಕ ೨೩-೧-೧೯೮೬ರ ಸರ್ಕಾರಿ ಆದೇಶವನ್ನು ಉಲ್ಲಂಘಿಸಿರುವ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಸರ್ಕಾರದ ದಿನಾಂಕ ೨೩-೧-೧೯೮೬ರ ಆದೇಶದಲ್ಲಿರುವ ಎಲ್ಲಾ ವಿಷಯಗಳ ಬಗ್ಗೆಯೂ ಏನು ಬದಲಾಯಿಸಿದಂತೆ ಕಾರ್ಯಗತ ಗೊಳಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡಲಾಗಿರುವುದು. ಈ ಆದೇಶವನ್ನು ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ. ಟಿ ಜಯಕುಮಾರ್.—ಸನ್ಮಾನ್ಯ ಅಧ್ಯಕ್ಷರೇ ಇದು ಬಹಳ ಗಂಭೀರವಾದ ವಿಷಯವಾಗಿದೆ. ಏತಕ್ಕೆಂದರೆ ಸರ್ಕಾರದ ಎಲ್ಲಾ ಆದೇಶಗಳನ್ನು ಪಾಲಿಸುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

I would like to quote the following Government order which says as follows :